**ದಿನಾಂಕಃ 25.02.2026 ರಂದು ಸಾಕ್ಷಿಗೆ ಪುನಃ ಪ್ರಮಾಣವಚನ ಬೋಧಿಸಲಾಯಿತು.**

**ಪಾಟಿ ಸವಾಲುಃ ಪ್ರತಿವಾದಿ ಪರ ಶ್ರೀ ಬಿ ಎಸ್ ಹೆಚ್ ವಕೀಲರಿಂದ**.

ನಿಮ್ಮ ಊರು ಯಾವುದು ಅಂದರೆ ಸಾಕ್ಷಿ ಹಾನಗಲ್ ತಾಲ್ಲೂಕು, ಕ್ಯಾಸನೂರು ಗ್ರಾಮ ಇರುತ್ತದೆ ಎನ್ನುತ್ತಾರೆ. ಚಿಕ್ಕಾಂಶಿ ಹೊಸೂರು ಗ್ರಾಮ ನಿಮ್ಮ ಊರು ಅಲ್ಲ ಅಂದರೆ ಸರಿ. ಯಾವ ಸರ್ವೇ ನಂಬರ್ ಜಮೀನಿನ ಬಗ್ಗೆ ಕರಾರುಪತ್ರ ಬರೆಸಿಕೊಂಡಿರುತ್ತೀರಿ ಅಂದರೆ ಸಾಕ್ಷಿ ಸರ್ವೇ ನಂ.19 ಎನ್ನುತ್ತಾರೆ. ನಿಮ್ಮ ಊರಿಗೂ ಮತ್ತು ದಾವಾ ಸ್ವತ್ತಿಗೂ ಎಷ್ಟು ಅಂತರ ಇರುತ್ತದೆ ಅಂದರೆ ಸಾಕ್ಷಿ 1 ಕಿ.ಮೀ ಅಂತರ ಇರುತ್ತದೆ ಎನ್ನುತ್ತಾರೆ. ಜಮೀನು ಖರೀದಿಯ ಮಾತುಕತೆ ಯಾವಾಗ ಮತ್ತು ಎಲ್ಲಿ ನಡೆದಿರುತ್ತದೆ ಅಂದರೆ ಸಾಕ್ಷಿ 2015 ನೇ ಇಸವಿಯಲ್ಲಿ ಪ್ರತಿವಾದಿಯ ಮನೆಯಲ್ಲಿ ಆಗಿರುತ್ತದೆ ಎನ್ನುತ್ತಾರೆ. ಮಾತುಕತೆಯ ಸಮಯದಲ್ಲಿ ಯಾರ್-ಯಾರು ಹಾಜರಿದ್ದರು ಅಂದರೆ ಸಾಕ್ಷಿ ನಾನು, ಪ್ರತಿವಾದಿ ಮತ್ತು ಖಾನಪ್ಪ ಇದ್ದೇವು ಖಾನಪ್ಪ ಮರಣ ಹೊಂದಿರುತ್ತಾನೆ ಎನ್ನುತ್ತಾರೆ. ಜಮೀನಿನ ಮಾತುಕತೆ ಕಾಲಕ್ಕೆ ಏನಾದರೂ ದಾಖಲೆ ಆಗಿರುತ್ತದೆಯಾ ಅಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಜಮೀನಿನ ಮಾತುಕತೆ ಎಷ್ಟಕ್ಕೆ ಆಗಿರುತ್ತದೆ ಅಂದರೆ ಸಾಕ್ಷಿ ರೂ.6 ಲಕ್ಷಕ್ಕೆ ಆಗಿರುತ್ತದೆ, ನಿಪಿ-1 ತಯಾರಾಗುವ ಕಾಲಕ್ಕೆ 3,50,000/- ಮುಗಂಡವಾಗಿ ಪ್ರತಿವಾದಿಗೆ ಕೊಟ್ಟಿರುತ್ತೇನೆ ಎನ್ನುತ್ತಾರೆ. ಬಾಕಿ ರೂ.2,50,000/- ವನ್ನು ಒಂದು ವರ್ಷದ ಒಳಗೆ ಕೊಟ್ಟು ಕ್ರಯಪತ್ರ ಬರೆಸಿಕೊಳ್ಳಬೇಕು ಎಂದು ಬರವಣಿಗೆ ಆಗಿರುತ್ತದೆ ಅಂದರೆ ಸರಿ. ಜಮೀನಿನ ಮಾತುಕತೆ ಕಾಲಕ್ಕೆ ದಾವಾ ಜಮೀನಿನ ದಾಖಲಾತಿ ನೋಡಿರುತ್ತೀರಾ ಅಂದರೆ ಸಾಕ್ಷಿ ನೋಡಿಲ್ಲ ಎನ್ನುತ್ತಾರೆ. ನಿಪಿ-1 ನೋಂದಣಿ ಆಗುವ

ಕಾಲಕ್ಕೂ ಸಹ ದಾವಾ ಜಮೀನಿನ ದಾಖಲಾತಿ ಸರಿ ಇತ್ತು ಅಂದರೆ ಸರಿಯಲ್ಲ. ಕರಾರುಪತ್ರ ಬರೆಸಿಕೊಳ್ಳುವ ಬದಲು ಕ್ರಯಪತ್ರವನ್ನೆ ಬರೆಸಿಕೊಳ್ಳಬಹುದಿತ್ತು ಅಂದರೆ ಸಾಕ್ಷಿ ಆ ಬಗ್ಗೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಕರಾರುಪತ್ರ ನೋಂದಣಿ ಮಾಡಿಸಿಕೊಳ್ಳುವ ದಿನದಂದು ನನ್ನ ಬಳಿ ರೂ.6 ಲಕ್ಷ ಹಣ ಇರಲಿಲ್ಲ ಅಂದರೆ ಸರಿ. ಕರಾರುಪತ್ರ ಯಾರಿಂದ ಬರೆಸಿರುತ್ತೀರಿ ಅಂದರೆ ಸಾಕ್ಷಿ ಪ್ರತಿವಾದಿಯೇ ಬರೆಸಿರುತ್ತಾನೆ ಎನ್ನುತ್ತಾರೆ. ಪ್ರತಿವಾದಿ ಕರಾರುಪತ್ರ ಬರೆಸಿರುತ್ತಾನೆಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಕರಾರುಪತ್ರ ಮಾಡಿಸಿಕೊಳ್ಳುವ ಸಮಯದಲ್ಲಿ ದಾವಾ ಸ್ವತ್ತಿನ ದಾಖಲೆಯನ್ನು ಪರಶೀಲಿಸಿರುವುದಿಲ್ಲ ಮತ್ತು ಪ್ರತಿವಾದಿಯ ಬಗ್ಗೆ ತಿಳಿದುಕೊಂಡಿರುವುದಿಲ್ಲ ಅಂದರೆ ಸರಿಯಲ್ಲ. ನಿಪಿ–1 ನ್ನು ಸೊರಬದ ಕೆ. ಎಸ್. ನಂದೀಶ್ ಎಂಬ ಪತ್ರ ಬರಹಗಾರದಿಂದ ನಾನೇ ಬರೆಸಿರುತ್ತೇನೆ ಅಂದರೆ ಸರಿಯಲ್ಲ. ನಿಪಿ–1 ಯಾವ ದಿನಾಂಕದಂದು ನೋಂದಣಿ ಆಗಿರುತ್ತದೆಂದು ಗೊತ್ತಾ ಅಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ನಿಪಿ–1 ನ್ನು ನೋಂದಣಿ ಮಾಡಿಸಲು ಆದ ಖರ್ಚನ್ನು ನಾನೇ ಭರಿಸಿರುತ್ತೇನೆ ಅಂದರೆ ಸರಿ. ನಿಪಿ–1 ನ್ನು ರೂ.600/– ಸ್ಟ್ಯಾಂಪ್ ಪೇಪರ್ ಮೇಲೆ ಬರೆಯಲಾಗಿದೆ ಅಂದರೆ ಸರಿ. ನೋಂದಾವಣಿ ಶುಲ್ಕ ಮತ್ತು ಮುಂದ್ರಾಂಕ ಶುಲ್ಕ ಉಳಿಸುವ ಸಂಬಂಧ ಕೇವಲ ರೂ.600/– ಸ್ಟ್ಯಾಂಪ್ ಪೇಪರ್ ನ ಮೇಲೆ ನಿಪಿ–1 ನ್ನು ತಯಾರಿಸಲಾಗಿದೆ ಅಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ನಿಪಿ–1 ರಲ್ಲಿ ದಾವಾ ಜಮೀನಿನ ಸ್ವಾಧೀನ ವಹಿಸಿಕೊಟ್ಟ ಬಗ್ಗೆ ಬರೆದಿಲ್ಲ ಅಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ದಾವಾ ಹಾಕಲು ವಕೀಲರಿಗೆ ನಾನೇ ಮಾಹಿತಿ ಕೊಟ್ಟಿರುತ್ತೇನೆ ಅಂದರೆ ಸರಿ. ದಾವಾ ಸ್ವತ್ತು ನನ್ನ ಸ್ವಾಧೀನದಲ್ಲಿ ಇದೆ ಎಂದು

ವಾದಪತ್ರದಲ್ಲಿ ಬರೆಸಿರುತ್ತೇನೆ ಅಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ನಿಪಿ-1 ನ್ನು ನೋಂದಣಿ ಮಾಡಿಸುವಾಗ ನಾನು ಮತ್ತು ಪ್ರತಿವಾದಿ ಸಮಯಕ್ಕೆ ಸರಿಯಾಗಿ ನೋಂದಣಿ ಕಚೇರಿಗೆ ಬಂದಿರುತ್ತೇವೆ ಅಂದರೆ ಸರಿ. ನಿಪಿ-1 ನೋಂದಣಿ ಮಾಡುವ ಕಾಲಕ್ಕೆ ಮೊದಲು ನನ್ನ ಭಾವಚಿತ್ರ ತೆಗೆದುಕೊಂಡು ಹೆಬ್ಬೆಟ್ಟಿನ ಗುರುತು ಪಡದಿರುತ್ತಾರೆ, ನಂತರ ಪ್ರತಿವಾದಿಯ ಭಾವಚಿತ್ರ ತೆಗೆದುಕೊಂಡು ಆತನ ಹೆಬ್ಬೆಟ್ಟಿನ ಗುರುತು ಪಡೆದಿರುತ್ತಾರೆ ಅಂದರೆ ಸರಿ. ನಿಪಿ-1 ರ ನೋಂದಣಿಗೆ ನಾನು ಮತ್ತು ಪ್ರತಿವಾದಿ ಭಾವಚಿತ್ರ ಮತ್ತು ಹೆಬ್ಬೆಟ್ಟಿನ ಗುರುತನ್ನು ನೀಡಿ ನೋಂದಣಿ ಕಚೇರಿಯ ಹೊರಗಡೆ ಕುಳಿತಿದ್ದೇವು ಅಂದರೆ ಸರಿ. ನಿಪಿ-1 ರಲ್ಲಿ ಸ್ವಾಧೀನ ಕೊಡದ ಎಂದು ಪೆನ್ನಿನಲ್ಲಿ ಪ್ರತಿವಾದಿ ಬರೆದಿರುತ್ತಾನೆಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ದಿನಾಂಕಃ 31.03.2016 ರ ಒಳಾಗಾಗಿ ಬಾಕಿ ರೂ.2,50,000/- ಹಣವನ್ನು ನಾನು ನನ್ನ ಬಳಿ ಸಿದ್ಧವಾಗಿ ಇಟ್ಟುಕೊಂಡಿರಲಿಲ್ಲ ಅಂದರೆ ಸರಿಯಲ್ಲ. 2016 ರಿಂದ 2025 ರ ಇಸವಿಯವರೆಗೆ ನಾನು ಕ್ರಯಪತ್ರ ಬರೆಸಿಕೊಳ್ಳುವ ಯಾವುದೇ ಪ್ರಯತ್ನ ಮಾಡಿಲ್ಲ ಅಂದರೆ ಸರಿಯಲ್ಲ. ನೋಟೀಸ್ ನ್ನು ಯಾವ ವಕೀಲರ ಮೂಲಕ ಪ್ರತಿವಾದಿಗೆ ಕೊಡಿಸಿರುತ್ತೀರಿ ಅಂದರೆ ಸಾಕ್ಷಿ ಹಾನಗಲ್ ವಕೀಲರು ಮೂಲಕ ಕೊಡಿಸಿರುತ್ತೇನೆ ಆದರೆ ಅವರ ಹೆಸರು ನನಗೆ ಗೊತ್ತಿಲ್ಲ ಎನ್ನುತ್ತಾರೆ. ಪ್ರತಿವಾದಿಗೆ ನೋಟೀಸ್ ನೀಡಲು ವಕೀಲರಿಗೆ ನಾನೇ ಮಾಹಿತಿ ಕೊಟ್ಟಿರುತ್ತೇನೆ ಅಂದರೆ ಸರಿ. ನೋಟೀಸ್ ಕೊಡುವಾಗ ವಕೀಲರಿಗೆ ನನಗೆ ಗೊತ್ತಿರುವ ಮಾಹಿತಿಯನ್ನು ಹೇಳಿರುತ್ತೇನೆ ಅಂದರೆ ಸರಿ. ನಿಪಿ-2 ರಲ್ಲಿ ಬರೆದಿರುವ ವಿಷಯ ಸರಿ ಇರುತ್ತದೆ ಅಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ನಿಪಿ-2 ಕ್ಕೆ ನಾನಾಗಲಿ ಅಥವಾ

ನಮ್ಮ ವಕೀಲರಾಗಲಿ ಉದ್ದೇಶ ಪೂರ್ವಕವಾಗಿ ಸಹಿ ಮಾಡಿರುವುದಿಲ್ಲ ಅಂದರೆ ಸಾಕ್ಷಿ ವಕೀಲರು ಸಹಿ ಮಾಡಲು ನನಗೆ ಹೇಳಿಲ್ಲ ನಾನು ಸಹಿ ಮಾಡಿಲ್ಲ ಎನ್ನುತ್ತಾರೆ. ನಿಪಿ-2 ರಲ್ಲಿ ನೀಡಿರುವ ಮಾಹಿತಿ ತಪ್ಪಿರುತ್ತದೆಂದು ನಾನು ಕ್ರಮ ತೆಗೆದುಕೊಂಡಿಲ್ಲ ಅಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ದಿನಾಂಕಃ 25.06.2015 ರಿಂದ 31.03.2016 ರ ಮಧ್ಯೆ ನನಗೆ ಬಾಕಿ ರೂ.2,50,000/- ಕೊಡುವ ಸಾಮರ್ಥ್ಯ ಇರಲಿಲ್ಲ ಅಂದರೆ ಸಾಕ್ಷಿ ನಿಪಿ-1 ಆದ 15 ದಿನಗಳ ನಂತರ ರೂ.1,50,000/- ಪ್ರತಿವಾದಿಗೆ ಕೊಟ್ಟಿರುತ್ತೇನೆ ಎನ್ನುತ್ತಾರೆ. ರೂ.1,50,000/-ವನ್ನು ಪ್ರತಿವಾದಿಗೆ ಕೊಟ್ಟ ಬಗ್ಗೆ ನನ್ನ ಬಳಿ ದಾಖಲೆ ಇರುವುದಿಲ್ಲ ಅಂದರೆ ಸಾಕ್ಷಿ ಪ್ರತಿವಾದಿಗೆ ಯಾವುದಾದರೂ ದಾಖಲೆಗೆ ಹಣ ತೆಗೆದುಕೊಂಡ ಬಗ್ಗೆ ಸಹಿ ಮಾಡಿಕೊಡು ಎಂದು ಕೇಳಿರುತ್ತೇನೆ ಆದರೆ ಪ್ರತಿವಾದಿ ಕೊಟ್ಟಿರುವುದಿಲ್ಲ ಎನ್ನುತ್ತಾರೆ. ಯಾವ ದಿನಾಂಕದಂದು ರೂ.1,50,000/- ವನ್ನು ಪ್ರತಿವಾದಿಗೆ ಕೊಟ್ಟಿರುತ್ತೀರಿ ಅಂದರೆ ಸಾಕ್ಷಿ ದಿನಾಂಕ ಗೊತ್ತಿಲ್ಲ ಆದರೆ ನಿಪಿ-1 ನೋಂದಣಿ ಆದ 15 ದಿನಗಳ ನಂತರ ಕೊಟ್ಟಿರುತ್ತೇನೆ ಎನ್ನುತ್ತಾರೆ. ದಾವಾ ಜಮೀನಿನ ಸ್ವಾಧೀನವನ್ನು ನಾನು ಹೊಂದಿರುವುದಿಲ್ಲ ಅಂದರೆ ಸರಿಯಲ್ಲ. 2016 ರಿಂದ 2025 ನೇ ಇಸವಿಯವರೆಗೆ ಕ್ರಯಪತ್ರ ಬರೆಸಿಕೊಳ್ಳಲು ನನಗೆ ತೊಂದರೆ ಇರಲಿಲ್ಲ ಅಂದರೆ ಸಾಕ್ಷಿ ನಾನು ಪ್ರತಿವಾದಿಯನ್ನು ಕೇಳಿರುತ್ತೇನೆ ಅವರು ಬರೆದುಕೊಟ್ಟಿಲ್ಲ ಎನ್ನುತ್ತಾರೆ.

**ಮುಂದುವರೆದ ಪಾಟಿ ಸವಾಲಿಗೆ ಸಮಯ ಕೋರಿರುತ್ತಾರೆ, ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕೃತಗೊಳಿಸಲಾಯಿತು)

ನನ್ನ ಸಮಕ್ಷಮ
ಓ.ಹೇ.ಕೇ.ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು, ಸೊರಬ.